ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/121/ನಿತಬ/2020-21/ಸೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:09.02.2021

ಸುತ್ತೋಲೆ

ವಿಷಯ: ಕರ್ನಾಟಕ ಸಿವಿಲ್ ಸೇವಾ ಪರಿವೀಕ್ಷಣೆ ನಿಯಮಗಳು, 1977ರ ನಿಯಮ 5ಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: 1. ದಿನಾಂಕ:05.01.2021ರ ಸಂಖ್ಯೆಸಿಆಸುಇ/153/ಸೇನನಿ/2020ರ ಅನಧಿಕೃತ ಟಿಪ್ಪಣಿ
2. ದಿನಾಂಕ:29.01.2021ರ ಸಂಖ್ಯೆ:ಇಡಿ/12/ವಿವಿಧ/2021ರ ಸರ್ಕಾರಿ ಪತ್ರ.

*****

ಉಲ್ಲೇಖ (1)ರ ಸರ್ಕಾರದ ಅನಧಿಕೃತ ಟಿಪ್ಪಣಿಯಲ್ಲಿ ಕರ್ನಾಟಕ ಸಿವಿಲ್ ಸೇವಾ ಪರಿವೀಕ್ಷಣೆ ನಿಯಮಗಳು, 1977ರ ನಿಯಮ 5ಕ್ಕೆ ತಿದ್ದುಪಡಿ ಮಾಡಲು ಉದ್ದೇಶಿಸಿದ್ದು ಈ ಕುರಿತು ಉಲ್ಲೇಖ(2)ರ ಸರ್ಕಾರಿ ಪತ್ರದಲ್ಲಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಕಛೇರಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಹಾಗೂ ಸರ್ಕಾರಿ ಪದವಿ ಕಾಲೇಜುಗಳಲ್ಲಿ (ಪದವಿ / ಕಾನೂನು / ಶಿಕ್ಷಣ & ಚಿತ್ರಕಲೆ) ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಲ್ಲಿ ಕೆಲವು ನೌಕರರು ದೀರ್ಘ ಕಾಲ ಸೇವೆಯಲಿದ್ದರೂ (2017ರ ನಂತರ ನೇಮಕಾತಿಗೊಂಡವರನ್ನು ಹೊರತುಪಡಿಸಿ) ಸೇವಾ ಪೂರ್ವ ಅವಧಿ ಘೋಷಣೆಯಾಗದೇ ನಿವೃತಿ/ಮರಣ ಹೊಂದಿರುವ/ಹೊಂದುತ್ತಿರುವ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ತುರ್ತಾಗಿ ಸರ್ಕಾರಕ್ಕೆ ಒದಗಿಸಲು ಕೋರಿದ್ದು, ಪ್ರಯುಕ್ತ ಸದರಿ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ **"Google Format Link"** **http://shorturl.at/oCFU3ನಲ್ಲಿ** ಒದಗಿಸಲಾಗಿರುವ ನಮೂನೆಯಲ್ಲಿ ದಿನಾಂಕ:10-02-2021ರೊಳಗೆ ತಪ್ಪದೇ ವೈಯಕ್ತಿಕ ಗಮನ ಹರಿಸಿ ಒದಗಿಲು ಕ್ರಮವಹಿಸುವಂತೆ ಸೂಚಿಸಿದೆ.

12/2/21

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:-

1. ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು/ಮಂಗಳೂರು/ಧಾರವಾಡ/ಗುಲ್ಬರ್ಗಾ/ಮೈಸೂರು/ ಶಿವಮೊಗ್ಗ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು,ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಹೆಚ್ಚಿನ ಪ್ರತಿ.
5. ಕಛೇರಿ ಪ್ರತಿ.

16/2/2021